ಮೈಸೂರ ಗೆಜಿಟ.

ಸಂ. XXXVIII] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ04

ಬೆಂಗಳೂರು, ಗುರುವಾರ, ಜನೆವರಿ ತಾ|| 29, ಸ್ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ಮಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಡಿ. ನಂಬರು 49ನೇ ಪ್ರಕಟನ ಪತ್ರಿಕೆ, ಸ್ 1902ನೆಯ ಇಸವಿ ಡಿಸಂಬರು ತಾರೀಖು 22.

ಮೈಸೂರು ದೇಶೀಯ ಪರೀಕ್ಷಾ ಭಾಷಾ ಗಂಥಗಳು.

ಇದರಡೀ ಕಂಡ ಭಾಷಾ ಗ್ರಂಥಗಳು ಸ್ 1904ನೆಯ ಇಸವಿ ನವಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ—ಗದ್ಯ...ಧರ್ಮಶರ್ಮಾಭ್ಯುದಯ—ಪೂರ್ತಿಯಾಗಿ.

ಪದ್ಯ...ಹೊಸ ಪದ್ಯಸಾರ, Iನೆಯ ಭಾಗ, ಪದ್ಯಗಳು 343—487.

ತೆಲುಗು—ಗದ್ಯ...ರಾಜಶೇಖರ ಚರಿತ್ರ, ಪುಟಗಳು 1—42 (ಐದು ಪ್ರಕರಣಗಳು.)

ಪದ್ಯ...ನಳಚರಿತ್ರಮು.

ಸಂಸ್ಕೃತ— ಮೊದಲನೆಯ ಭಾಷೆ.

ಪದ್ಯ...ರಘುವಂಶ, III ಮತ್ತು IVನೆಯ ಸರ್ಗಗಳು.

ಗದ್ಯ...ಕಥಾಸರಿತಸಾಗರ (ಜೀವಾನಂದರಿಂದ ಗದ್ಯರೂಪದಲ್ಲಿ ರಚಿಸಲ್ಪಟ್ಟದ್ದು)—V ಮತ್ತು VIನೆಯ ತರಂಗಗಳು.

ಎರಡನೆಯ ಭಾಷೆ.

ವಿಕ್ರಮಾರ್ಕ ಚರಿತ್ರೆ (ಮೈಸೂರು ಇಲಾಖೆಯ ಭಾಷೆ)—28ನೆಯ ಕಥೆಯಿಂದ ಕಡೆಯ ವರೆಗೆ.

ಲ್ಯಾಟಿನ್—ಸೀಜರ್ ಡಿಬೆಲ್ಲೊ ಗ್ಯಾಲಿಕೊ, Vನೆಯ ಪುಸ್ತಕ.

ಹಿಂದುಸ್ತಾನಿ—ಗದ್ಯ...ತಾಜಿಬುಲ್ ಅಃಕ್ಲಾಃಕ್ ಆರ್ಯೆ—ಎ—ಹಿಂದ್, ಉತ್ತರಾರ್ಧ. ಮೌಲ್ವಿಸುಕಾವುಲ್ಲ ಸಾಹೇಬರವರಿಂದ ರಚಿಸಲ್ಪಟ್ಟುದು. (ಚಪೆಕ್ಕೃತ—ಆಂ ಪೆಸ್, ದೆಹಲಿ.)

ಪದ್ಯ...ಮಜ್ಜ್ ಮುಆ—ಎ—ಸಖ್ರ್, IIನೆಯ ಭಾಗ, ಉತ್ತರಾರ್ಧ—(ನವಲ್‌ಕಿಪೋರೀ ಪೆಸ್, ಲಕ್ನೊ.)

ಫಾರಸಿ— ಮೊದಲನೆಯ ಭಾಷೆ.

ನರ್ಮಯ್ಯ—ಖಿರದ್ (ಪಂಜಾಬ್), ಸಿಕಂದರ್ ನಾಮಯಿಂದ ಅರಿಸಲ್ಪಟ್ಟ ಭಾಗವಿನಾ.

ಎರಡನೆಯ ಭಾಷೆ.

ಪದ್ಯ...ಜೋಸ್ಯಾ—VII ಮತ್ತು VIIIನೆಯ ಅಧ್ಯಾಯಗಳು.

ಗದ್ಯ...ಸಿಗರೇದಾನೀಷ್, Xನೆಯ ಅಧ್ಯಾಯದಿಂದ ಕೊನೆಯ ವರೆಗೆ—(ನವಲ್ ಕಿಷೋರೀ ಪ್ರೆಸ್, ಲಕ್ನೊ.

ಇದರಡಿ ಕಂಡ ಭಾಷಾ ಗ್ರಂಥಗಳು ಸ್ಯ 1904ನೆಯ ಇಸವಿ ನವಂಬರ್ ತಿಂಗಳಲ್ಲಿ ನಡೆಯುವ ಮೈಸೂರು ದೇಶ ಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ :—

ಕನ್ನಡ - ಪದ್ಯ...(1) ಹರಿಶ್ಚಂದ್ರ ಕಾವ್ಯ—ಆಧ್ಯಾಯಗಳು I—V, ರಾಘವಾಂಕರಿಂದ ರಚಿಸಲ್ಪಟ್ಟುದು.

(2) ಕಾದಂಬರಿ—ಮೊದಲನೆಯ 100 ಪದ್ಯಗಳು.

(3) ಹೇಮಚಂದ್ರ ರಾಜ್ಯವಿಲಾಸ (ಕಿಂಗ್ಲಿಯರ್).

ಗದ್ಯ....(1) ರಾಮಾಶ್ವಮೇಧ—ಪುಟಗಳು 31—60.

(2) ಅರ್ಥಶಾಸ್ತ್ರ—ಪುಟಗಳು 1—65, ಮೈ|| ನಂಜುಂಡಯ್ಯನವರಿಂದ ರಚಿಸಲ್ಪಟ್ಟುದು.

ಸಂಸ್ಕೃತ—(1) ರಘುವಂಶ, I ಮತ್ತು IIನೆಯ ಸರ್ಗಗಳು

(2) ಪಂಚತಂತ್ರ, (ಮುಂಬೈ ಭಾಷೆ) IVನೆಯ ಭಾಗ.

ಹಿಂದುಸ್ತಾನಿ—ಗದ್ಯ...ನಿಸಬೆಳುರ್ದು—ಗದ್ಯ ಭಾಗ.

ಪದ್ಯ...ದೀವಾನ್—ಎ—ಅಮೀರ್, ರದೀಫ್—ಎ—ನೂರ್‌ಯಿಂದ ಅಂತ್ಯದ ವರೆಗೆ.

ಫಾರಸಿ—ಪದ್ಯ...ದಿವಾನಿಹಾಫಿಜ್—ಮೊದಲನಿಂದ ರದೀಫಿರ ಅಂತ್ಯದ ವರೆಗೆ.

ಗದ್ಯ...ಅಖ್ವಾರೆ ಸೊಹಿಲೆ—ಆಧ್ಯಾಯಗಳು VIIರಿಂದ ಅಂತ್ಯದ ವರೆಗೆ.

ಹಚ್. ಜೆ. ಭಾಭಾ,

ಇನ್‌ಸ್ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್, ಮೈಸೂರು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 17ನೇ ಜನವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಾನಕಾನಹಳ್ಳಿ ತಾಲ್ಲೂಕು ಕಬ್ಬಾಳು ಸ್ಪೇಟ್ ಫಾರೆಸ್ಟಿನಲ್ಲಿ ಗುರ್ತುಮಾಡಿರುವ ಕೂಪಿನಲ್ಲಿನ ಚಾಪೀನೆ ಮತ್ತು ಸೌದೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತುಗಳಿಗೆ ಬಳಪಟ್ಟು ಕಡಿದು ಸಾಗಿಸಿಕೊಳ್ಳುವ ಹಕ್ಕುದಾನಿಯು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜನವರಿ 31ನೇ ತಾರೀಖು ದಿನದ ಕಬ್ಬಾಳಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

2. ಈ ಹರಾಜು ಫಾರೆಸ್ಟ್ ಕನ್‌ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವಕಾರಣವನ್ನು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ಯಮು ನಡಿಸುವ ಫಾರೆಸ್ಟ್ ಆಫಿಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೇಯೇ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಸೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್‌ದಾರನು ಇಷಪೇಕಾದ 75 ಜುಮ್ಲಾ 100 ರೂಪಾಯಿಗಳನ್ನು ಗಾರ್ನಮೆಂಟ್ ಸೇವಿಂಗ್ಸ್‌ಬ್ಯಾಂಕಿನಲ್ಲಿ ಇಡುತ್ತೆ.

5. ಹರಾಜು ಮಂಜೂರಾತಿ ತಿಳಿಸಿದ ಬಂದು ವಾರದೊಳಗಾಗಿ ಮುಂಜೂರಾದ ಸವಾಲ್‌ದಾರನು ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪನ್ನು ಪುನಃ ಹರಾಜು ಮಾಡಿಸಲಾದೀತು. ಮುನರೆ ಹರಾಜಿನಲ್ಲಿ ಏನಾದರೂ ಲುಕ್ಸಾನ್ ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿಕೊಡಬೇಕು. ಆದರೇ ಏನಾದರೂ ಜಾಸ್ತಿ ಬಂದರೆ ಹಿಸ್ಸೆ ದೊರೆಯಲಾರದು.

ಷರತ್ತುಗಳು.

1. ಸಂದಲ್ ಗಿಡಗಳು, ಗುರ್ತುಮಾಡಿಯಿರುವ ಮರಗಳು ಮತ್ತು ಸೊಸಿಗಳು ಅಂದರೆ ಸುತ್ತಳತೆ ಬುಂಡಿ ವಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿಮಟ್ಟಕ್ಕೆ ಸರಿಯಾಗಿ ಕತರಾಯಿಸಿಕೊಳ್ಳಬೇಕು.

2. ಸೌದೆ ಮತ್ತು ಚಾಪೀನೆ ಗಿಡಗಳು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ವುಂಟಾದರೆ ಕಂಟ್ರಾಕ್ಟುದಾರನು ಫಾರೆಸ್ಟ್ ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ಮೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಮರಗಳು ಇತರ ಪಸುರೆ ಬಾಬುಗಳು ಮತ್ತು ಹುಲ್ಲು ಇದು ಯಾವದೂ ಹರಾಜಿಗೆ ಶೇರಿಯಿಲ್ಲಾ. ಯಾವದಾದರೂ ಮರಗಳನ್ನು ಮನ್ಯಾನೆಯಾಗಿ ಕಡಿದರೆ ಅಂಥಾದ್ದೆಲ್ಲಾ ಇಲಾಖಾ ಮೂಲಕ ಪತ್ತು ಕಾಲ್ಸು ಮಾಡಿಸಿ ತಗಲುವ ಖರ್ಚಿನ್ನು 100 ಬಂದನೂರು ರೂಪಾಯಿನ ಸೆಕ್ಯೂರಿಟಿ ದಿಂದ ವಸೂಲ್ಮಾಡತ್ತೆ.

4. ಚಾಪೀನೆ ಮತ್ತು ಸೌದೆ ಕತ್ತಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಜೂನ್ 30ರ ವಳಗೆ ಪೂರೈಸಿಕೊಳ್ಳಬೇಕು. ಹಾಗೆಮಾಡದೇ ಇದ್ದರೆ ಕಂಟ್ರಾಕ್ಟುದಾರನು ಖಾತರಿಗಾಗಿ ಕೊಟ್ಟುಯಿರುವ ಮೊಬಲಗನ್ನು ಸರ್ಕಾರಕ್ಕೆ ಶೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಚಾಪೀನೆ ಸೌದೆ ಕತ್ತಾವಣಿ ಮಾಡಿಕೊಳ್ಳುವ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದಾಗಿ ಇರುತ್ತೆ.